-

ಅ.ದಾ. ಸಂಖ್ಯೆ:- 92/2018
ಪಿಡಬ್ಲ್ಯೂ:- 1

ದಿನಾಂಕಃ 15-02-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರಃ ಶ್ರೀ. ಕೆ.ವಿ.ಡಿ. ವಕೀಲರಿಂದ.

13. ಪ್ರತಿವಾದಿಗಳು ದಾವಾ ಅನುಸೂಚಿ ಸ್ವತ್ತಿನ ಯಾವುದೇ ಭಾಗವನ್ನು ಎಂದಿಗೂ ಒತ್ತುವರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ತಮಗೆ ಸರ್ಕಾರದಿಂದ ಹಂಚಿಕೆಯಾದ ಜಾಗದಲ್ಲಿ ಅಂದಿನಿಂದಲೂ ಸ್ವಧೀನತೆಯನ್ನು ಹೊಂದಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸರ್ವೆ ನಂ. 309 ರಲ್ಲಿ ತಮಗೆ ಹಂಚಿಕೆಯಾದ ಗ್ರಾಮಠಾಣಾ ಜಮೀನಿನಲ್ಲಿ ಸಾರ್ವಜನಿಕ ಶೌಚಾಲಯ, ಚಿಕನ್ ಸ್ಟಾಲ್ ಮತ್ತು ಓಪನ್ ವೆಲ್ ಹಾಗೂ ಅಂಗನವಾಡಿಗಳು ಇವೆ ಎಂದರೆ ಸರಿಯಲ್ಲ. ಸದರಿ ಜಾಗದಲ್ಲಿ ಅಂಗನವಾಡಿಯು ಇಂದಿಗೂ ಚಾಲ್ತಿಯಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ. 309 ರ ಪ್ರತಿವಾದಿಗಳ ಜಾಗದಲ್ಲಿ ಸಾರ್ವಜನಿಕ ಶೌಚಾಲಯ, ಚಿಕನ್ ಸ್ಟಾಲ್ ಮತ್ತು ಓಪನ್ ವೆಲ್ ಹಾಗೂ ಅಂಗನವಾಡಿಗಳು ಇವೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅ.ದಾವಾ ಸಂಖ್ಯೆ: 96/2018 ರಲ್ಲಿ ನ್ಯಾಯಾಲಯದ ಆದೇಶದ ಮೇರೆಗೆ ಚಿಕನ್ ಸ್ಟಾಲ್ ನ್ನು ತೆರವುಗೊಳಿಸಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಅ.ದಾವಾ ಸಂಖ್ಯೆ: 96/2018 ರಲ್ಲಿ ನಮ್ಮ ಜಾಗದಲ್ಲಿದ್ದ ಚಿಕನ್ ಸ್ಟಾಲ್ ನ್ನು ತೆರವುಗೊಳಿಸಬೇಕೆಂದು ನಾವು ಪರಿಹಾರವನ್ನು ಕೇಳಿದ್ದೆವು. ಸದರಿ ದಾಖಲೆಯನ್ನು ಈ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ. ಅ.ದಾವಾ ಸಂಖ್ಯೆ: 96/2018 ರಲ್ಲಿ ನಾವು ಸದರಿ ಜಾಗದಲ್ಲಿ ಟೆಂಡರ್ ಮಾಡಬಾರದು ಎಂದು ನಾವು ಪರಿಹಾರವನ್ನು ಕೋರಿದ್ದೆವು ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಏಕಪಕ್ಷೀಯವಾಗಿ ಆದೇಶ ಪಡೆದುಕೊಂಡು ಸರ್ವೆ ನಂ. 309 ರಲ್ಲಿದ್ದ ಸಾರ್ವಜನಿಕ ಶೌಚಾಲಯ, ಚಿಕನ್ ಸ್ಟಾಲ್ ಮತ್ತು ಓಪನ್ ವೆಲ್ ಗಳನ್ನು ಕಾನೂನು ಬಾಹಿರವಾಗಿ ತೆರವುಗೊಳಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಸರ್ವೆ ನಂ. 309 ರಲ್ಲಿ ಸಾರ್ವಜನಿಕ ಶೌಚಾಲಯ, ಚಿಕನ್ ಸ್ಟಾಲ್ ಮತ್ತು ಓಪನ್ ವೆಲ್ ಗಳು ಇದ್ದ ಬಗ್ಗೆ ಪಂಚಾಯತಿಯಲ್ಲಿ ಇಂದಿಗೂ ದಾಖಲಾತಿಗಳು ಲಭ್ಯವಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 309 ರ ಪ್ರತಿವಾದಿಗಳ ಜಾಗಕ್ಕೆ ನಾನು ಅಕ್ರಮವಾಗಿ ಪ್ರವೇಶ ಮಾಡಿ ಸದರಿ ಮೇಲ್ಕಂಡ ಸಾರ್ವಜನಿಕ ಶೌಚಾಲಯ, ಚಿಕನ್ ಸ್ಟಾಲ್ ಮತ್ತು ಓಪನ್ ವೆಲ್ ಗಳನ್ನು ನಾಶ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಇದರ ವಿಚಾರವಾಗಿ ಪ್ರತಿವಾದಿಗಳು ನನ್ನ ವಿರುದ್ಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಿದ್ದರು ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತನ್ನು ನನಗೆ ಮಾರಾಟ ಮಾಡಿದ ವ್ಯಕ್ತಿಗೂ ಕೂಡ ಸದರಿ ಸ್ವತ್ತಿನಲ್ಲಿ ಯಾವುದೇ ಅಧಿಕಾರ, ಮಾಲೀಕತ್ವ, ಹಕ್ಕು ಮತ್ತು ಭಾದ್ಯತಗಳು ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ವ್ಯಕ್ತಿಗೆ ಈ ದಾವಾ ಅನುಸೂಚಿ ಸ್ವತ್ತನ ಮೇಲೆ ಯಾವುದೇ ಮಾಲೀಕತ್ವ ಇಲ್ಲದಿದ್ದರೂ ಸಹಾ ಅಕ್ರಮವಾಗಿ ಕಾನೂನು ಬಾಹಿರವಾಗಿ ಕ್ರಯಪತ್ರವನ್ನು ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

14. ದಾವಾ ಅನುಸೂಚಿ ಸ್ವತ್ತಿನ ಖಾತೆಯು ನನ್ನ ಹೆಸರಿಗೆ ಬದಲಾವಣೆ ಆದ ಬಗ್ಗೆ ಹಾಗೂ ಸದರಿ ಆದೇಶದ ವಿರುದ್ಧ ಶಿವಮೊಗ್ಗದ ಎ.ಸಿ. ನ್ಯಾಯಾಲಯಲ್ಲಿ ಪ್ರಕರಣ ಚಾಲ್ತಿಯಲ್ಲಿರುತ್ತದೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತಿನ ಮೇಲೆ ಎಂದಿಗೂ ಕೂಡ ನನಗೆ ಹಕ್ಕು ಮಾಲೀಕತ್ವ ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 309/ಎ ರಲ್ಲಿ 2 ಎಕರೆ 02 ಗುಂಟೆ ಜಮೀನು ಸರ್ಕಾರದ ಸ್ವಾಧೀನತೆಯಲ್ಲಿದೆ ಮತ್ತು ಸರ್ವೆ ನಂ. 309/ಬಿ ರಲ್ಲಿ 2 ಎಕರೆ 04 ಗುಂಟೆ ಜಮೀನು ಗ್ರಾಮಠಾಣಾ ವ್ಯಾಪ್ತಿಯಲ್ಲಿ ಪ್ರತಿವಾದಿಗಳ ಸ್ವಾಧೀನತೆಯಲ್ಲಿ ಇದೆ ಎಂದರೆ ಸರಿಯಲ್ಲ.

15. ನಮ್ಮ ಕುಟುಂಬದಲ್ಲಿ ಸುಮಾರು 5-6 ವರ್ಷಗಳ ಹಿಂದೆ ವಿಭಾಗ ಆಗಿರುತ್ತದೆ. ಸದರಿ ವಿಭಾಗವು ನೊಂದಾಯಿತ ವಿಭಾಗಪತ್ರವಾಗಿರುತ್ತದೆ. ದಾವಾ ಅನುಸೂಚಿ ಸ್ವತ್ತು ನನ್ನ ಮತ್ತು ನನ್ನ ಪತ್ನಿಯ ಜಂಟಿ ಖಾತೆಯಾಗಿರುತ್ತದೆ. ಸದರಿ ಜಂಟಿ ಖಾತೆಯು ವಿಭಾಗ ಪತ್ರದ ಆಧಾರದ ಮೇಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತು ನನ್ನ ಸ್ವಯಾರ್ಜಿತ ಸ್ವತ್ತಾಗಿರುತ್ತದೆ. ಸದರಿ ವಿಚಾರವನ್ನು ಉದ್ದೇಶಪೂರ್ವಕವಾಗಿ ನ್ಯಾಯಾಲಯಕ್ಕೆ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಚಾಲ್ತಿ ವರ್ಷದ ಪಹಣಿ ಪತ್ರಿಕೆಯಲ್ಲಿ ದಾವಾ ಅನುಸೂಚಿ ಸ್ವತ್ತನ್ನು ನನ್ನ ಹೆಂಡತಿಯ ಹೆಸರಿನಲ್ಲಿ ನಮೂದಿಸಿರುತ್ತಾರೆ ಎಂದರೆ

ಸರಿಯಲ್ಲ. ನನ್ನ ಪತ್ನಿಯ ಹೆಸರು ಸುಚಲಿತ ಶೆಟ್ಟಿ. ದಿಃ 12-06-2018 ರಲ್ಲಿ ಪ್ರತಿವಾದಿಯವರು ದಾವಾ ಅನುಸೂಚಿ ಸ್ವತ್ತಿಗೆ ಅಕ್ರಮವಾಗಿ ಪ್ರವೇಶ ಮಾಡಿ ತೊಂದರೆ ನೀಡಿದ್ದರು ಎಂದು ಹೇಳಿರುವುದು ಸತ್ಯಕ್ಕೆ ದೂರ ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸಲು ಸುಳ್ಳು ದಾವಾ ಕಾರಣ ಹೇಳಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯವರ ಜಮೀನನ್ನು ಕಬಳಿಸುವ ದೃಷ್ಟಿಯಿಂದ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಮೇಗರವಳ್ಳಿ ಗ್ರಾಮಸ್ತರು ಸಾರ್ವಜನಿಕ ಹಿತಾಸಕ್ತಿ ವ್ಯಾಜ್ಯವನ್ನು 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯು ವಿಚಾರಣೆಗೆ ಬಾಕಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಶಕುಂತಲಮ್ಮ ಎನ್ನುವವರು ಅವರ ಜಾಗಕ್ಕೆ ಸಂಬಂಧಿಸಿದಂತೆ ನಾನು ತೊಂದರೆ ನೀಡುತ್ತಿದ್ದೇನೆ ಎಂದು ನನ್ನ ವಿರುದ್ದ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ. ಈ ದಾವೆಯನ್ನು ವಜಾ ಮಾಡುವುದರಿಂದ ನನಗೆ ಯಾವುದೇ ತೊಂದರೆ ಆಗುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ವಿರುದ್ದ ನಾನು ಸುಳ್ಳು ದಾವೆ ಸಲ್ಲಿಸಿರುವುದರಿಂದ ಅವರಿಗೆ ದಾವಾ ವೆಚ್ಚವನ್ನು ನೀಡಲು ನಾನು ಭಾದ್ಯಸ್ತ ಎಂದರೆ ಸರಿಯಲ್ಲ.

<u>**ಮರುವಿಚಾರಣೆಃ**</u> ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ.

1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು,
ತೀರ್ಥಹಳ್ಳಿ.